51st Year of Publication ★ SATYAVADI Daily, MYORE 4

Reg No B G 155 1-7-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available
For Permanent Advertisement

ಸ್ಥಾಪಕರು ... ಮುದ್ರಕರು ... ಪ್ರಕಾಶಕರು : ಧರ್ಮಪ್ರಚಾರನಿರತ ಎಂ. ಎಚ್. ಕೃಷ್ಣರಾವ್ [2 ಪೈಸೆ

ಭಾರತದ ಮೇಲೆ ಅಮೇರಿಕಾದ ಪ್ರಭಾವವೇ !

ಭಾರತದ ಮೇಲೆ ಅಮೇರಿಕಾ ಪ್ರಭಾವವೆ !

ವಾಷಿಂಗ್ಟ್ಟನ್— ಭಾರತವು ಶಸ್ತ್ರಾಸ್ತ್ರ ಕೊಳ್ಳೋಣವಾಟವನ್ನು ತಪ್ಪಿಸಲು ಅಮೇರಿಕಾಕ್ಕೆ ಭಾರತದ ಮೇಲೆ ಪ್ರಭಾವ ಬೀರಲು ಮಾರ್ಗವಿದೆ ಎಂದು ವಿದೇಶೀ ವಿಚಾರ ಸಮಿತಿಗೆ ರಕ್ಷಣಾ ಅಸಿಸ್ಟೆಂಟ್ ಸೆಕ್ರೆಟರಿ ತಿಳಿಸಿದರೇ.

★

ರಾಜಶ್ರೀ. ಮೇಲಿನ ಮೊಕದ್ದಮೆ

ಬೊಂಬಾಯಿ— ಚಲಚ್ಚಿತ್ರ ತಾರೆ ರಾಜಶ್ರೀ ಮತ್ತು ಆಕೆಯ ತಾಯಿ ಜಯಶ್ರೀ ಮೇಲಿನ ಮೋಸದ ಅಪಾದನೆ ಮೊಕದ್ದಮೆಯು ಆಗಸ್ಟ್ 22ಕ್ಕೆ ಹಾಕಲಾಗಿದೆ

★

ಹೇಮಾವತಿ ಜಲಾಶಯ

ಬೆಂಗಳೂರು— ಹಾಸನ ಜಿಲ್ಲಾ ಗೊರೂರಿನಲ್ಲಿ ಹೇಮಾವತಿ ಜಲಾಶಯ ಪಾಜೆಕ್ಟಿನ ಕೆಲಸದ ಉತ್ಖಾಟನೆಯನ್ನು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ನೆರವೇರಿಸಿದರು.

●

ಪ್ರಪಂಚ ಶಾಂತಿಗಾಗಿ

ಋಷೀಕೇಶ್‌ನಲ್ಲಿ ದೈವಜೀವನ ಸಂಘದವರು ಪ್ರಪಂಚ ಶಾಂತಿಗಾಗಿ ಭಾರಿ ಯಜ್ಞವನ್ನು ಡಿಸೆಂಬರು 3 ರಂದು ನಡೆಸಲಿರುವರು.

★

ಬೃಹದಾಕಾರ ಪ್ರತಿಮೆ

ನೈಲ್ ನದಿಯಿಂದ ಕೆಲವು ಸಾವಿರ ಮೈಲಿಗಳ ದೂರದಲ್ಲಿರುವ ಸೋವಿಯಟ್ ಮಧ್ಯ ಏಷ್ಯಾದಲ್ಲಿ ಒಂದು ಸ್ಮಿಂಕ್ಸ್ (ಸಿಂಹದ ಒಡಲು, ಮನುಷ್ಯ ಮುಖ ಇರುವ) ಬೃಹತ್ಪ್ರತಿಮೆಯನ್ನು ಅಗೆದು ತೆಗೆಯಲಾಗಿದೆ.

ಅಮೇರಿಕಾದಲ್ಲಿ ಹೊಟ್ಟೆಗಿಲ್ಲ !

18 ಕೋಟಿ ಜನಸಂಖ್ಯೆಯಲ್ಲಿ 1 ಕೋಟಿ ದಿನವೂ ಹೊಟ್ಟೆಗಿಲ್ಲದೆ ಒದ್ದಾಡುತ್ತಿದ್ದಾರೆ ; 50ಷ್ಟಮಿಲಿಯ ಸ್ಕೂಲು ಹುಡುಗರು ಹೆಸಿದ ಹೊಟ್ಟೆಯಿಂದ ಸ್ಕೂಲಿಗೆ ಬರುತ್ತಾರೆ : ಸಂಖ್ಯೆಗಳು ತತ್ಕರಿಸುತ್ತವೆ. ಹಾಲು ಜೇನು ಹರಿಯುತ್ತಿದೆಯೆಂದು ಹೇಳಲಾಗುತ್ತಿರುತ್ತಿರುವ ದೇಶದಲ್ಲಿ ಇದು !

(ಟ್ರೂತ್)

★

18 ದಿನದ ಉಪವಾಸ

ವಾಷಿಂಗ್ಟ್ಟನ್— ನೀಗ್ರೋ ನಾಯಕರೆ ॥ ಅಬರ್ನಾತಿ ವಾಷಿಂಗ್ಟ್ಟನ್ ಜೈಲಿನಲ್ಲಿ 18 ದಿನಗಳ ಉಪವಾಸ ಪ್ರಾರಂಭಿಸಿದರು.

★

8000 ಆಡಿ ಕೆಳಗೆ ಬಿದ್ದು ಸತ್ತ

ಸ್ಪ್ರಿಂಗ್‌ಫೀಲ್ಡ್— 8000 ಆಡಿ ಎತ್ತರದಲ್ಲಿ ಹೋಗುತ್ತಿದ್ದ ವಿಮಾನದ ಬಾಗಿಲು ಅಕಸ್ಮಾತ್ ತೆಗೆಯಲ್ಪಟ್ಟು ಒಬ್ಬನು ಕೆಳಗೆ ಬಿದ್ದು ಸತ್ತನು.

★

ಹೊಸ ಚುನಾವಣೆ

ನವದೆಹಲಿ— ಉತ್ತರ ಪ್ರದೇಶ, ಬೀಹಾರು, ಪಶ್ಚಿಮ ಬಂಗಾಳಾಗಳಲ್ಲಿ ಮುಂದಿನ ವರ್ಷ ಫೆಬ್ರವರಿಯಲ್ಲಿ ಹೊಸ ಚುನಾವಣೆ ನಡೆಯಬಹುದು.

★

ಚಕ್ ಮೂಕ ರೈಲು ಚಾರ್ಜು

ಪಶ್ಚಿಮ ಜರ್ಮನಿಯಲ್ಲಿ ಖಾಸಗಿಯಾಗಿರುವ ರೈಲುಗಳಲ್ಲಿ ಪ್ರಯಾಣೀಕರು ಈಗ ಚಕ್ ಮೂಲಕ ಹಣ ಪಾವತಿಮಾಡಬಹುದು : ಅದರ ಜೊತೆ ಕ್ರೆಡಿಟ್ ಕಾರ್ಡು ತೋರಿಸಬೇಕು.

ನವದೆಹಲಿ— ಬೀಹಾರಿನಲ್ಲಿ ಅಧ್ಯಕ್ಷರ ಆಳ್ವಿಕೆ ಶನಿವಾರ ಜಾರಿಗೆ ಬಂದಿತು.

ಭಾರತಕ್ಕೆ ಸ್ವೀಡ್ ಸಾಲ

ನವದೆಹಲಿ— ಕಚ್ಚಾ ಪದಾರ್ಥ ಆಮದಿಗೆ ಮತ್ತು ಕೈಗಾರಿಕಾ ಸಲಕರಣೆಗಾಗಿ ಸ್ವೀಡ್ ಭಾರತಕ್ಕೆ—ಒಟ್ಟು ರೂ. 10.5 ಕೋಟಿಯ ಎರಡು ಸಾಲಾ ಕೊಡುವದು.

●

ಜನಸಂಖ್ಯೆಯ ಒತ್ತಡವಿಲ್ಲ

ತನ್ನೆಲ್ಲ ಫಲವತ್ತಾದ ಭೂಮಿಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿದ್ದೇ ಆದರೆ ಭಾರಗಿವು ಜನಸಂಖ್ಯೆಯ ಒತ್ತಡದ ದೇಶವಾಗುವುದಿಲ್ಲ. (ಜನಪದ)

★

ಅಪಾಕ ಬೆಳ್ಳಿ ಪತ್ತೆ

ಸೂರತ್— ಬುಲ್ಸಾರ್‌ನಲ್ಲಿರುವ ವಾಪಿ ಹತ್ತಿರ ಒಂದು ಮೂವಿನ ಮರದ ಕೆಳಗೆ ರೂ. 3.16 ಲಕ್ಷ ಮೌಲ್ಯದ ಬೆಳ್ಳಿ ವಶಪಡಿಸಿಕೊಳ್ಳಲಾಯಿತು.

●

ಆತ್ಮಹತ್ಯ

ಮೆಂಗಳೂರು— ಸಾಲದ ಭೀಕರ ಪರಿಸ್ಥಿತಿ ತಾಳಲಾರದೆ, ಗಂಡಹೆಂಡರು ಆತ್ಮಹತ್ಯ ಮಾಡಿಕೊಂಡರು ; ಈಚೆಗೆ ಸಂಸಾರದಲ್ಲಿ ನಡೆದ ಮದುವೆಗೆ ಸಾಲಾ ಮಾಡಲಾಗಿತ್ತು.

★

ಜಾಕ್‌ಪಾಟ್

ಬೆಂಗಳೂರು— ಭಾನುವಾರದ ಕುದುರೆ ಜೂಜಿನಲ್ಲಿ ಜಾಕ್‌ಪಾಟ್ ಪೂಲ್‌ನಲ್ಲಿ 1 ಟಿಕೀಟಿಗೆ ರೂ. 101840 ಸಿಕ್ಕಿತು.

★

ರಥೋತ್ಸವ

ಪುರಿಯಲ್ಲಿ ಶುಕ್ರವಾರ ನಡೆದ ಜಗನ್ನಾಥ ಸ್ವಾಮಿ, ಬಲಭದ್ರ ಮತ್ತು ಸುಭದ್ರರ ರಥೋತ್ಸವವನ್ನು ಒಂದು ಲಕ್ಷ ಜನ ವೀಕ್ಷಿಸಿದರು.

ಮಂತ್ರಿಗೆ ಚಿನ್ನದ ಟೆಲಿಫೋನ್

ಸಹೆರ್ಜ (ಡಾಡ್)— ರೇಡಿಯೋ ಧರ್ಮಪ್ರಚಾರಕರಾದ ಆ್ಯಂಟ್ ಹೋಲೆಯವರಿಗೆ ' ಹೊಸ ಜೀವನ " ಎಂಬ ಧಾರ್ಮಿಕ ಸಂಸ್ಥೆಯ ಸಹೋದ್ಯೋಗಿಗಳು ಇತ್ತೀಚೆಗೆ ಒಂದು ಚಿನ್ನದ ಟೆಲಿಫೋನನ್ನು ಅರ್ಪಿಸಿದ್ದಾರೆ. (ಯು ಪಿ ಎಸ್)

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಜುಲೈನಲ್ಲಿ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮುತ್ತಿತರಗಣ್ಯರು ಅಭಿಪ್ರಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯನವರು, ಶ್ರೀ ಮಾಧವ್ ಶಿನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಅಪೆಕ್ಸ್ ಬ್ಯಾಂಕೀಸಿನವರು, ಪದ್ಮಭೂಷಣ ನೇತ್ರಪ್ರಾಣಿ ಡಾ॥ ಎಂ.ಸಿ. ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಯವರು ಶುಭಾಶಯಸಂದೇಶ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆಡರ ವಿಶ್ವಾಸಗಳಿಂದ ನೀಡಿ ಸಹಕರಿಸಲ್ಲಿಕಾಗಿ ವಿನಂತಿಸಿ, ಈಡೇರುವಿಕೆಯಿಂದ ಚಿತಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ ' ಸತ್ಯವಾದಿ '
ಚಾಮರಾಜಪುರಂ, ಮೈಸೂರು 4.

★

ಭಕ್ತ ತುಳಸೀದಾಸ್

(ಮುಂದುವರಿದುದು)

ತುಳಸಿದಾಸ್ ಚಿತ್ರಕೂಟದಲ್ಲಿದ್ದಾನೆ. ಕೆಲ ಕಾಲ ಕಳೆಯಿತು. ಒಂದು ದಿನ ಒಂದು ಜಿಂಕೆಯನ್ನಟ್ಟಕೊಂಡು ಬಿಲ್ಲುಬತ್ತಳಿಕೆಯೊಡನೆ ಕುದುರೆ ಮೇಲೆ ಕುಳಿತು ಬರುತ್ತಿದ್ದ ಇಬ್ಬರು ಯುವಕರಾಜಕುಮಾರರನ್ನು ತುಳಸಿದಾಸನು ಕಂಡನು. ಕನಸಿನಲ್ಲಿ ಕಂಡಂತೆ ಅವರು ಹೊರಟುಹೋದರು. ಅವರನ್ನು ನೋಡಿದೊಡನೆ ತುಳಸಿದಾಸನ ಹೃದಯವು ಬಂಧಿತವಾಯಿತು, ಅವನ ಆತ್ಮವು ಅತ್ಯಾನಂದಗೊಂಡಿತು.

ಈ ಯುವರಾಜಕುಮಾರರು ಯಾರಿರಬಹುದು– ಎಂದು ತುಳಸಿದಾಸನು ಯೋಚಿಸಿದನು. ಮಾನವನು ಅವರಂಥಹ ಆಕರ್ಷಣೀಯ ಮನಮೋಹಕ ಸೌಂದರ್ಯವನ್ನು ಹೇಗೆ ಹೊಂದಿರಬಲ್ಲರು ; ಓ ಅಂತಹ ಅತಿಶಯ ಮತ್ತು ನಿಶರ್ವಚನೀಯ ಸೌಂದರ್ಯದ ಮೇಲೆ ನನ್ನ ಕಣ್ಣನ್ನು ಎಂದಿಗೂ ಇಟ್ಟರಬಲ್ಲೆ– ಎಂದುಕೊಂಡನು ತುಳಸೀದಾಸ್.

ಭಗವಂತನ ಇಚ್ಛೆಯಿಲ್ಲದೆ ಗಾಳಿಬೀಸಲಾರದು ; ಒಂದು ಹುಲ್ಲುಕಡ್ಡಿಯೂ ಜೆಳೆಯಲಾರದು. ಭಗವಂತನ ಇಚ್ಛೆಯಿಲ್ಲದೆ ಏನೂ ನಡೆಯುವುದಿಲ್ಲ. ತುಳಸಿದಾಸನು ತನ್ನ ಸ್ವಂತ ಕಣ್ಣುಗಳಿಂದ ಕಂಡರೂ, ಅವರ ಅಸಮಾನ ಮತ್ತು ಅತ್ಯಂತ ಮನಮೋಹಕ ಸೌಂದರ್ಯದಿಂದ ಇವರು ಮಾನವ ರೂಪಿನ ದೇವರೆಂದು ತಿಳಿದರೂ, ತನ್ನ ಆತ್ಮದೃಜಯಿಸಲಾಗ ಹಂಬಲವು ಅಸಾರ್ಯವೆಂಬುದನ್ನು ಸಾರುತ್ತಿದ್ದರೂ, ತುಳಸಿದಾಸನು ರಾಮಲಕ್ಷ್ಮಣರನ್ನು ಗುರುತಿಸಲಿಲ್ಲ.

(ಮುಂದುವರಿಯುವುದು)

ವುಡ್‌ಲಾಂಡ್ಸ್ 28-6-68 ರಿಂದ

ಅಮೋಘ ಆರಂಭ

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

Jhuk Gaya Aasman

ಜುಕ್ ಗಯಾ ಆಸಾನ್

ಪಾತ್ರ— ರಾಜೇಂದ್ರಕುಮಾರ್, ಸೈರಾಬಾನು, ಪ್ರೇಂ ಘೋಷ್, ರಾಜೇಂದ್ರನಾಥ್

ಸಂಗೀತ– ಶಂಕರ್ ಜೈಕಿಷನ್ [ದಿನ 3 ಪ್ರದರ್ಶನಗಳು]

ಆಪೇರ— 28-6-68 ರಿಂದ

.... ಅತ್ಯಮೋಘ ತಮಿಳು ಚಿತ್ರ ....

ನಾನ್ ಯಾರ್ ತೆರೀಮಾ?

ಪಾತ್ರ— ಜಯಶಂಕರ್, ಭಾರತಿ, ಬಿ.ವಿ ರಾಧಾ, ದೇವರ್, ಚೋ

Golden Jubilee of 'Satyavadi'

The golden jubilee of the 'Satyavadi' is to be celebrated in July.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

SHAKTI

SUDHA

A Superb Tonic

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀದ್ವಾರಕಾ ಜಗದ್ಗುರು ಪೂಜಾಶ್ರೀಪಾದಂಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸನ್ನಿಧಾನಂಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ಕರ್ನಾಟಕದಲ್ಲಿ ಗೋರಕ್ಷಣೆ ಪಾಠಶಾಲೆಯ, ತಾತ್ಪರ್ಯಾಹಾರ, ಪಶುವೈದ್ಯ, ಪತ್ರಿಕೆಗಳ ಏಕೈಕ ಪ್ರಚಾರ ವಾರಪತ್ರಿಕೆ : ವಾರ್ಷಿಕ ಚಂದಾ 50 ಪೈಸೆ

— ಗೋರಕ್ಷಣೆ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳೆದಿರುವವರು ಇನ್ನೂ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು

ಶ್ರೀ ಅನಂತಸಂಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ,ಹೊಂಗನೂರು

ಗೋರಕ್ಷಣ ಅಫೀಸು ಸತ್ಯವಾದಿ ಪ್ರೆಸ್, ಚಾಮರಾಜಪುರಂ ಮೈಸೂರು 4

ವಿಳಾಸ— ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಶೇಧವಾಗಲಿ

Protect the Cow

★

ಗೋರಕ್ಷಣೆ ಮುಖ್ಯ ಸಭೆಯಲ್ಲಿ ಅಲ್ಲಿಯ ಅಧಿಕಾರಿಗಳು ಹೀಗೆ ಚಿತ್ರವನ್ನು ನಡೆಯುವಂತೆ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4